ಬಂದಾದ ಮೇಲೆ ಅವರಿಗೆ ಕೊಡಲೇಬೇಕು ಎಂದು ಹೇಳಿ ಹೈಕೋರ್ಟಿನ ಆದೇಶದ ಆಧಾರದ ಮೇಲೆ ತೀರ್ಮಾನ ಕೈಗೊಂಡು ಅವರಿಗೆ ಪ್ರಾವಿಡೆಂಟ್ ಫಂಡ್, ರಿಟ್ರೆಂಚ್‌ಮೆಂಟ್ ಕಾಂಪೆನ್‌ಸೇಷನ್, ಗ್ರಾಚ್ಯುಯಿಟಿ ಇವೇನು ಕೊಡಬೇಕೊ ಅವಷ್ಟನ್ನೂ ಕೊಡುವುದಕ್ಕೆ ತೀರ್ಮಾನವನ್ನು ಮಾಡಿದ್ದೇವೆ. ಈಗಾಗಲೇ ಪಾವತಿ ಮಾಡುತ್ತಿದ್ದೆವು. ಹಣ ಬಿಡುಗಡೆಯಾಗದ ಕಾರಣಕ್ಕಾಗಿ ತೊಂದರೆಯಾಯಿತು. ಹೆಚ್ಚುಕಡಿಮೆ 3 ಕೋಟಿ ರೂಪಾಯಿಗಳನ್ನು ಪುನರ್ ವಸತಿಗೆ ಮತ್ತು ಅವರಿಗೆ ಕೊಡಬೇಕಾದ ಎಲ್ಲವನ್ನು ಕೊಡುತ್ತೇವೆ. 300 ಚಿಲ್ಲರೆ ಜನ ಈ ರಾಜ್ಯದಲ್ಲಿದ್ದಾರೆ. ಅವರು ಮುಂದೆ ಉದ್ಯೋಗ ಮುಂದುವರಿಸಿಕೊಂಡು ಹೋಗುವುದಕ್ಕೆ ಅವರಿಗೆ ಬೇಕಾದ ಸವಲತ್ತುಗಳನ್ನು ಖಂಡಿತವಾಗಿಯೂ ಕೊಡುತ್ತೇವೆ.

ಪ್ರಶ್ನೆ ಸಂಖ್ಯೆ 287 (3552)

ಅಧ್ಯಕ್ಷರು :— ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿಯವರ ಪ್ರಶ್ನೆಯನ್ನು ಕಂದಾಯ ಇಲಾಖೆಗೆ ವರ್ಗಾಯಿಸಲಾಗಿದೆ.

ತೆಲುಗು ಜನಾಂಗದವರ ಸಮೀಕ್ಷೆ

289 (3441) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತೆಲುಗು ಜನಾಂಗದವರು ಕರ್ನಾಟಕದ ಯಾವ ಯಾವ ಜಿಲ್ಲೆಯಲ್ಲಿ ಇದ್ದಾರೆ ಪ್ರಸ್ತುತ ಅವರುಗಳನ್ನು ಯಾವ ವರ್ಗಕ್ಕೆ ಸೇರ್ಪಡೆ ಮಾಡಲಾಗಿದೆ

ಆ) ಈ ಜನಾಂಗದವರನ್ನು ಹಿಂದುಳಿದ ಜನಾಂಗವೆಂದು ಪರಿಗಣಿಸಲು ಸರ್ಕಾರವೇನಾದರೂ ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ತೆಲುಗು ಮಾತನಾಡುವ ಸಂಪೂರ್ಣ ಜನಾಂಗವನ್ನು ಹಿಂದುಳಿದ ವರ್ಗಕ್ಕೆ ಸೇರಿಸಲು ಪರಿಗಣಿಸುವ ಯಾವುದೇ ಪ್ರಸ್ತಾವನೆ ಆಥವಾ ಮನವಿ ಇರುವುದಿಲ್ಲ. ಆದರೆ 'ತೆಲುಗುಗೌಡ' ಜನಾಂಗವನ್ನು ಹಿಂದುಳಿದ ವರ್ಗಕ್ಕೆ ಸೇರಿದ ಜನಾಂಗವೆಂದು ಪರಿಗಣಿಸುವ ಮನವಿಗಳು ಬಂದಿರುತ್ತವೆ. ಸದರಿ ಮನವಿಗಳು ಪರಿಶೀಲನೆಯಲ್ಲಿರುತ್ತದೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಕರ್ನಾಟಕದಲ್ಲಿ ತೆಲುಗು ಭಾಷೆ ಮಾತನಾಡತಕ್ಕವರೆಲ್ಲಾ ಹಿಂದುಳಿದ ವರ್ಗದವರು ಎಂದು ಹೇಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಉತ್ತರವನ್ನು ಕೊಟ್ಟಿದ್ದಾರೆ. ಇವರಿಗೆ ತೆಲುಗು ಭಾಷೆಯೇ ಗೊತ್ತಿಲ್ಲ. ಅವರ ಸಾಮಾಜಿಕ ನೀತಿಯನ್ನು ನೋಡಿದರೆ ಅವರು

ಕುರಿ ಸಾಕುತ್ತಾರೆ. ದನವನ್ನು ಸಾಕುತ್ತಾರೆ. ಒಕ್ಕಲುತನವನ್ನು ಮಾಡುತ್ತಾರೆ. ಅವರಲ್ಲಿ ವಿದ್ಯಾವಂತರ ಸಂಖ್ಯೆ ಕಡಿಮೆ. ಅವರಿಗೆ ಇನ್ನೊಂದು ಹೆಸರು ತೆಲುಗು ಗೌಡರು ಎಂದು ಹೇಳುತ್ತಾರೆ. ಅವರಿಗೆ ತೆಲುಗು ಗೌಡರು ಎಂದು ಹೆಸರಿದ್ದರೂ ಕೂಡ ಯಾವುದೇ ಈ ರಾಜ್ಯದ ಒಕ್ಕಲಿಗರ ಸಮಾಜದಲ್ಲಾಗಲಿ ಗೌಡರ ಸಮಾಜದಲ್ಲಾಗಲಿ, ಯಾವುದೇ ಸಂಬಂಧವನ್ನೂ ಬೆಳಸಿಲ್ಲ. ಈ ದೇಶಕ್ಕೆ ಸ್ವತಂತ್ರ್ಯ ಬಂದು 50 ವರ್ಷ ಕಳೆದರೂ ಕೂಡ ಅವರಿಗೆ ಯಾವುದೇ ಸೌಕರ್ಯ ಸಿಕ್ಕಿಲ್ಲ. ಇವರು ಅವರು ಮುಂದುವರೆದ ಜನಾಂಗದೊಂದಿಗೆ ಹೋರಾಟ ಮಾಡಬೇಕಾಗಿದೆ. ಇವತ್ತು ವಿದ್ಯಾರ್ಥಿನಿಲಯದಲ್ಲಿ ಒಂದು ಸೀಟಾಗಲಿ, ಅವರಿಗೆ ಶಾಲೆಯಲ್ಲಾಗಲಿ ಯಾವುದೇ ಇಲ್ಲ. ಬೇರೆ ಯಾವುದೇ ಸರ್ಕಾರದ ಸವಲತ್ತುಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಈ ಉತ್ತರವನ್ನು ನೋಡಿದರೆ ಏನೋ ಅಧಿಕಾರಿಗಳು ಬೇಜವಾಬ್ದಾರಿಯಿಂದ ಕೊಟ್ಟಿದ್ದಾರೆ. ಇದರ ಬಗ್ಗೆ ವಿಧಾನಸಭೆಯಲ್ಲಿ ಹಿಂದೆ ಎರಡು-ಮೂರು ಸಲ ಪ್ರಸ್ತಾಪಮಾಡಿದ್ದೇನೆ. ಸಮಾಜ ಕಲ್ಯಾಣ ಇಲಾಖಾ ಸಚಿವರು ಕಡೂರಿಗೆ ಬಂದಂಥ ಸಂದರ್ಭದಲ್ಲಿ ತೆಲುಗು ಗೌಡರು ಆ ಜನಾಂಗದವರು ಅವರಿಗೆ ಮನವಿಯನ್ನು ಕೊಟ್ಟಿದ್ದಾರೆ. ರವಿವರ್ಮ ಕುಮಾರ್‌ರವರ ಆಯೋಗ ಬಂದಂಥ ಸಂದರ್ಭದಲ್ಲಿ ಆ ಜನಾಂಗದವರು ಮತ್ತು ಜನಪ್ರತಿನಿಧಿಗಳಾದ ನಾನು ಮತ್ತು ಕೆ.ಬಿ. ಮಲ್ಲಿಕಾರ್ಜುನ್‌ರವರು ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆ. ನಾನು ಶಾಸಕನಾಗಿ ಏಳು ವರ್ಷವಾಯಿತು. ಏಳು ವರ್ಷದಿಂದಲೂ ಈ ಪ್ರಶ್ನೆಯನ್ನು ಹಾಕುತ್ತಲೇ ಇದ್ದೇನೆ. ನಮ್ಮ ಸರ್ಕಾರದಲ್ಲೂ ಹಾಕಿದ್ದೇನೆ. ಅವರಿಗೆ ಏನಾದರೂ ಪರಿಹಾರವನ್ನು ಕೊಡಿ, ಅವರಿಗೆ ಏನಾದರೂ ಸವಲತ್ತು ಕೊಡಿ ಎಂದು ಕೇಳಿದ್ದೇನೆ. ಅವರಲ್ಲಿ ಅಕ್ಷರಸ್ಥರ ಸಂಖ್ಯೆಯೂ ಕಡಿಮೆ. ಅವರಿಗೆ ರಾಜಕೀಯವಾಗಿ ಮೇಲೆ ಬರುವುದಕ್ಕೆ ಸಾಧ್ಯವಾಗುತ್ತಿಲ್ಲ. ಸರ್ಕಾರ ಯಾವುದೇ ಕಾರ್ಯಕ್ರಮಗಳನ್ನು ಇಲ್ಲಿ ಮಾಡಿದರೂ ಕೂಡ ಆ ಸವಲತ್ತು ಅವರಿಗೆ ಸಿಗುತ್ತಿಲ್ಲ. ನನಗೆ ಮಾನ್ಯ ಸಚಿವರು ಭರವಸೆಯನ್ನು ಕೊಡಬೇಕು. ಅವರನ್ನು ಏನಾದರೂ ಈ ಸಾರಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸುವುದಕ್ಕೆ ಸಾಧ್ಯವೇ? ಅವರನ್ನು ತೆಲುಗು ಗೌಡರು ಎಂದು ಹೇಳುತ್ತಾರೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ :— ಮಾನ್ಯ ಅಧ್ಯಕ್ಷರೇ, ಈ ಉತ್ತರವನ್ನು ನೋಡಿದರೆ ಕಾಗೋಡು ತಿಮ್ಮಪ್ಪನವರ ಉತ್ತರ ಕಂಡಂತೆ ಕಾಣುತ್ತಿಲ್ಲ. ಮೊದಲನೇ ಪ್ರಶ್ನೆಗೆ ಉತ್ತರವನ್ನೇ ಹೇಳಿಲ್ಲ. ಮಾನ್ಯ ಸಚಿವರನ್ನು ಸ್ವದೇಶಕ್ಕೆ ಸ್ವಾಗತ ಮಾಡುತ್ತಾ ಮೊದಲನೇ ಪ್ರಶ್ನೆ ಕೇಳುತ್ತಿದ್ದೇನೆ. ಇದನ್ನು ಟಾಪ್ ಪ್ರೈಯಾರಿಟಿ ಮೇಲೆ ಕನ್ಸಿಡರ್ ಮಾಡಬೇಕೆಂದು ಹೇಳುತ್ತೇನೆ. ತೆಲುಗು ಜನಾಂಗದವರು ಕರ್ನಾಟಕದ ಯಾವ ಜಿಲ್ಲೆಯಲ್ಲಿದ್ದಾರೆ, ಅವರನ್ನು ಯಾವ ವರ್ಗಕ್ಕೆ ಸೇರ್ಪಡೆ ಮಾಡಲಾಗಿದೆ ಎಂದಿದ್ದಕ್ಕೆ ಉತ್ತರವನ್ನೇ ಹೇಳಿಲ್ಲ. ಬೇರೆ ಉತ್ತರವನ್ನು ಹೇಳಿದ್ದಾರೆ. ಕಳೆದ 10-15 ವರ್ಷಗಳಿಂದಲೂ ಇದರ ಬಗ್ಗೆ ನಾವು ಮನವಿಯನ್ನು ಕೊಡುತ್ತಲೇ ಬಂದಿದ್ದೇವೆ. ರವಿವರ್ಮ ಕುಮಾರ್ ಆಯೋಗ ಏನಿತ್ತು,

ನಾವು ಆ ಕಮಿಟಿ ಮೆಂಬರ್ಸ್‌ಗಳನ್ನೆಲ್ಲಾ ಕರೆದುಕೊಂಡು ಹೋಗಿ ಎಲ್ಲಾ ಜಾಗಗಳನ್ನೂ ತೋರಿಸಿ ಅವರಿಗೆ ಸೂಕ್ತವಾಗಿರುವ ಹಾಗೆ ಮನವರಿಕೆಯನ್ನು ಮಾಡಿಕೊಟ್ಟಿದ್ದೇವೆ. ನನ್ನ ಪ್ರಶ್ನೆ ಏನೆಂದರೆ ಇದು ರವಿವರ್ಮ ಕುಮಾರ್‌ರವರ ವರದಿಯಲ್ಲಿ ತೆಲುಗು ಗೌಡ ಜನಾಂಗವನ್ನು ಹಿಂದುಳಿದ ವರ್ಗಕ್ಕೆ ಸೇರಿಸುವುದಕ್ಕೆ ಅವರು ಶಿಫಾರಸ್ಸು ಮಾಡಿದ್ದೀರಾ? ಎರಡನೆಯದು ಆ ಶಿಫಾರಸ್ಸನ್ನು ಯಾವಾಗ ತಾವು ಜಾರಿಗೆ ತರುತ್ತೀರಿ ಎನ್ನುವುದು. ಎರಡಕ್ಕೂ ಉತ್ತರ ಹೇಳಿದ ಸಂದರ್ಭದಲ್ಲಿ ಇದನ್ನು ಅತೀ ಶೀಘ್ರವಾಗಿ ತರಬೇಕೆನ್ನುವ ಒತ್ತಾಯ ಏಕೆ ಎಂದರೆ ಈ ಜನಾಂಗದವರಿಗೆ ಯಾವುದೇ ರೀತಿಯ ಸವಲತ್ತುಗಳೂ ಸಿಗುತ್ತಿಲ್ಲ. ಅವರಿಗೆ ಹಾಸ್ಟೆಲ್‌ನಲ್ಲಿ ಸೀಟ್ ಕೊಡುವುದಕ್ಕೆ ಆಗುತ್ತಿಲ್ಲ. ಅವರನ್ನು ಕಾಲೇಜುಗಳಿಗೆ ಸೇರಿಸುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಇದನ್ನು ಟಾಪ್ ಪ್ರೈಯಾರಿಟಿ ಮೇಲೆ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಕೇಳಿ ಕೊಳ್ಳುತ್ತೇನೆ.

ಶ್ರೀ ಸಿ. ಗುರುಸ್ವಾಮಿ :— ಮಾನ್ಯ ಅಧ್ಯಕ್ಷರೇ, ನಮ್ಮ ಚಾಮರಾಜನಗರ ತಾಲ್ಲೂಕಿನಲ್ಲೂ ಒಂದು ಬಡಗಲಪುರ ಎನ್ನುವ ಒಂದು ಗ್ರಾಮ ಇದೆ. ಅವರು ಜಂಗಾಲಿಗರು. ಬಹಳ ಮೈನರ್ ಮೆಕ್ರೋಸ್ಕೋಪಿಕ್ ಬ್ಯಾಕ್‌ವರ್ಡ್ ಎಂತಲೂ ಹೇಳಬಹುದು. ಅವರನ್ನು ಈ ವರ್ಗದಲ್ಲಿ ಕೈಬಿಟ್ಟಿದ್ದಾರೆ. ಅವರಿಗೆ ಯಾವುದೇ ರೀತಿಯ ಸವಲತ್ತು ಇಲ್ಲ. ಹಾಸ್ಟೆಲ್‌ಗಳಲ್ಲೂ ಸೀಟ್ಸ್ ಇಲ್ಲ. ಅಪಾಯಿಂಟ್‌ಮೆಂಟ್ ಬಗ್ಗೆ ಇಲ್ಲ. ಇದರ ಬಗ್ಗೆ ಅನೇಕ ಮನವಿಗಳನ್ನು ಕೂಡ ಕೊಟ್ಟಿದ್ದಾರೆ. ಅಲ್ಲಿ ಒಂದೇ ಒಂದು ಗ್ರಾಮದಲ್ಲಿರತಕ್ಕಂಥವರು. ಅವರ ಬಗ್ಗೆಯೂ ತಾವು ಕನ್‌ಸಿಡರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬಹಳ ಹಿಂದುಳಿದ ಜನ ಅವರು.

ಶ್ರೀ ಹಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೇ, ಮೊದಲನೇ ಪ್ರಶ್ನೆಯನ್ನು ಕೇಳುವ ಸ್ವರೂಪದಿಂದಲೇ ಅದಕ್ಕೆ ಬೇಕಾದ ಉತ್ತರವನ್ನು ನಾವು ಕೊಟ್ಟಿದ್ದೇವೆ. ಏಕೆಂದರೆ ತೆಲುಗು ಜನಾಂಗ ಎಂದರೆ ಯಾರನ್ನು ಸೇರಿಸಬೇಕು ಎಂದು ಹೇಳುವುದಕ್ಕಾಗುವುದಿಲ್ಲ. ಅಲ್ಲಿ ಪ್ರಶ್ನೆ ಇರುವುದು ತೆಲುಗು ಗೌಡರು ಎಂದು ಇದೆ.

ಶ್ರೀ ಕೆ.ಬಿ. ಕೃಷ್ಣಮೂರ್ತಿ :— ನಮ್ಮ ಆಡು ಭಾಷೆಯಲ್ಲಿ ಅವರಿಗೆ ತೆಲುಗರು ಎಂದು ಹೇಳುತ್ತೇವೆ. ಒಂದೊಂದು ಸಾರಿ ತೆಲುಗು ಗೌಡರು ಎಂದು ಹೇಳುತ್ತಾರೆ. ಅಲ್ಲಿ ಆಡು ಭಾಷೆ ಏನಿದೆ, ಆ ರೀತಿ ನಾನು ಕೊಟ್ಟಿದ್ದೇನೆ. ಅವರು ನಿಮಗೆ ಮನವಿಯನ್ನೂ ಕೂಡ ಕೊಟ್ಟಿದ್ದಾರೆ.

ಶ್ರೀ ಹಾಗೋಡು ತಿಮ್ಮಪ್ಪ :— ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷ್ಣಮೂರ್ತಿಯವರ ಪ್ರಶ್ನೆ ಇದಕ್ಕೇ ಆಗಿರಬೇಕೆಂದು ಊಹಿಸಿಕೊಂಡು ತೆಲುಗು ಗೌಡರು ಎನ್ನುವ ಜಾತಿಯ ಪ್ರಶ್ನೆಯ ಬಗ್ಗೆಯೇ ನಾವು ಉತ್ತರವನ್ನು ಕೊಟ್ಟಿದ್ದೇವೆ. ನಮ್ಮ ಹಿಂದುಳಿದ ವರ್ಗದ

ಆಯೋಗ ಏನು ಇದೆ, ಅದನ್ನು ಶಿಫಾರಸ್ಸು ಮಾಡಿದ್ದಾರೆ. ಸರ್ಕಾರ ಪರಿಶೀಲನೆಯಲ್ಲಿ ಇದೆ. ಅದಷ್ಟು ಬೇಗ ಇದರ ಬಗ್ಗೆ ಒಂದು ಅಂತಿಮ ತೀರ್ಮಾನವನ್ನು ಮಾಡುತ್ತೇವೆ.

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ತೆಲುಗು ಗೌಡರನ್ನು ಹಿಂದುಳಿದ ವರ್ಗಕ್ಕೆ ಸೇರಿಸಿದರೆ ಈಗೇನು 30-32 ಪರ್‌ಸೆಂಟ್ ಇದೆಯೋ, ಆ ಜನಸಂಖ್ಯೆ ಕೂಡ ಒಂದೂವರೆ ಎರಡು ಲಕ್ಷ ಇರುವುದರಿಂದ ಆಗ ಹಿಂದುಳಿದ ವರ್ಗದ ಮೀಸಲಾತಿಯನ್ನೂ ಕೂಡ ಜಾಸ್ತಿ ಮಾಡಬೇಕಾಗುತ್ತದೆ. ಅದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾದ ಭರವಸೆಯನ್ನು ಕೊಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ :— ಈಗ ಸರ್ಕಾರಕ್ಕೆ ವರದಿ ಬಂದಿದೆ. ಅದನ್ನು ನಾವು ಪರಿಷ್ಕರಣೆ ಮಾಡುತ್ತಿದ್ದೇವೆ. ಅದು ಸಚಿವ ಸಂಪುಟದ ಮುಂದೆ ಹೋಗುತ್ತದೆ. ಅದು ಅಂತಿಮವಾಗಿ ತೀರ್ಮಾನವಾದ ಮೇಲೆ ಕಾರ್ಯರೂಪಕ್ಕೆ ಬಂದೇ ಬರುತ್ತದೆ. ವರದಿ ಬಂದಿದೆ. ಪರಿಷ್ಕರಣೆ ನಡೆಯುತ್ತಿರಬಹುದು. ಗುರುಸ್ವಾಮಿಯವರು ಚಾಮರಾಜನಗರದಲ್ಲಿ ಇರುವ ಜನಾಂಗದ ಬಗ್ಗೆ ಪ್ರಶ್ನೆ ಕೇಳಿದರು, ಆ ಜನಾಂಗದ ಪ್ರಶ್ನೆ ಇಲ್ಲಿ ಇಲ್ಲ. ಅದು ಇಲ್ಲದೇ ಇರುವುದರಿಂದ ಇಲ್ಲಿ ಹೇಳುವುದು ಕಷ್ಟವಾಗುತ್ತದೆ.

ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಯ ಮಂಜೂರಾತಿ

290 (3622) ಶ್ರೀಮತಿ ಅನುಸೂಯಮ್ಮ ನಟರಾಜ್ ಕೆ.ವಿ. (ಚಿಕ್ಕಬಳ್ಳಾಪುರ) :— ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ ಹೆಚ್ಚಿನ ನಿರುದ್ಯೋಗಿಗಳಿದ್ದು ಸಮಸ್ಯೆ ಪರಿಹಾರವಾಗುವಂತೆ ಯಾವುದಾದರೂ ಸಣ್ಣ ಕೈಗಾರಿಕೆಯನ್ನು ಪ್ರಾರಂಭಿಸಲು ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವರೇ?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :—

ಅ) ಸಣ್ಣ ಕೈಗಾರಿಕೆಗಳನ್ನು ರಾಜ್ಯ ಸರ್ಕಾರದಿಂದ ನೇರವಾಗಿ ಸ್ಥಾಪಿಸಲಾಗುವುದಿಲ್ಲ. ಆದರೆ, ಉದ್ಯಮಗಳನ್ನು ಸ್ಥಾಪಿಸಲಾಗುವುದಿಲ್ಲ. ಆದರೆ, ಉದ್ಯಮಗಳನ್ನು ಸ್ಥಾಪಿಸುವವರಿಗೆ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಹೊಸ ಕೈಗಾರಿಕಾ ನೀತಿಯ ಪ್ರಕಾರ ನೀಡಲಾಗುತ್ತಿದೆ. ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದಲ್ಲಿ 2000-2001 ನೇ ಸಾಲಿನಲ್ಲಿ 67 ಸಣ್ಣ ಪ್ರಮಾಣದ ಕೈಗಾರಿಕೆಗಳು ನೊಂದಣಿಯನ್ನು ಪಡೆದಿದ್ದು, ರೂ.185.72 ಲಕ್ಷ ಬಂಡವಾಳವನ್ನು ತೊಡಗಿಸಿದ್ದು 260 ಮಂದಿಗೆ ಉದ್ಯೋಗಾವಕಾಶ ದೊರೆತಂತಾಗಿದೆ.